**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–560 001**

ಪತ್ರ ಸಂಖ್ಯೆ: ಸ.ಶಿ.ಅ/ನಲಿ–ಕಲಿ ಘಟಕ/ಕೋಶ–4/.2009–10 ದಿನಾಂಕ: 23.11.2009

**ಸುತ್ತೋಲೆ**

ವಿಷಯ: ನಲಿ–ಕಲಿ ಪ್ರಗತಿ ವಸ್ತುನಿಷ್ಠವಾಗಿ ಹೊಸ ನಮೂನೆಗಳಲ್ಲಿ ಮಾಹಿತಿ ಸಂಗ್ರಹಿಸಿ ಪ್ರಗತಿ ಮತ್ತು ಕ್ರಮ ತೆಗೆದುಕೊಳ್ಳುವ ಕುರಿತು.

ಉಲ್ಲೇಖ: 1. ಈ ಕಛೇರಿ ಪತ್ರ ಸಂಖ್ಯೆ ಸ.ಶಿ.ಅ/ನಲಿ–ಕಲಿ ಕೋಶ/2009–10 ದಿನಾಂಕ: 04.07.09
2. ದಿನಾಂಕ 27.10.09 ರಂದು ಈ ಕಛೇರಿಯಲ್ಲಿ ಜಿಲ್ಲಾ ನಲಿ–ಕಲಿ ಸಂಪನ್ಮೂಲ ಘಟಕಗಳ ಸದಸ್ಯ ಕಾರ್ಯದರ್ಶಿಗಳ ಸಭೆ ಚರ್ಚೆ ಹಾಗೂ ನಡಾವಳಿ

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ನಲಿ–ಕಲಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕ್ಲಸ್ಟರ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ ವಿವಿಧ ಹಂತಗಳಲ್ಲಿ ನಲಿ–ಕಲಿ ಸಂಪನ್ಮೂಲ ಘಟಕ/ಕೋಶಗಳನ್ನು ಸ್ಥಾಪಿಸಿ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ಪ್ರತಿ ಹಂತದ ಘಟಕ/ಕೋಶಗಳು ತಿಂಗಳಿಗೊಮ್ಮೆ ತಪ್ಪದೇ ಸಭೆ ಸೇರಿ ನಲಿ–ಕಲಿ ಬೋಧನಾ ಕಾರ್ಯಕ್ರಮದಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಪರಿಹಾರ ಕಂಡುಕೊಳ್ಳಲು ಸೂಕ್ತ ಯೋಜನೆಗಳ ತಯಾರಿ, ಅನುಷ್ಠಾನ, ಹಿಮ್ಮಾಹಿತಿ ಹಾಗೂ ತೆಗೆದುಕೊಂಡ ಕ್ರಮಗಳ ಕುರಿತು ವ್ಯವಸ್ಥಿತವಾಗಿ ಕ್ರಮ ಮಾಡುವಂತೆ ಮತ್ತೊಮ್ಮೆ ಸೂಚಿಸಿದೆ ಹಾಗೂ ವರದಿಗಳನ್ನು ಕಳುಹಿಸುವಂತೆ ತಿಳಿಸಿದೆ.

ದಿನಾಂಕ: 27.10.2009 ರಂದು ಈ ಕಛೇರಿಯಲ್ಲಿ ನಡೆಸಿದ ಜಿಲ್ಲಾ ಸಂಪನ್ಮೂಲ ಘಟಕಗಳ ಸದಸ್ಯ ಕಾರ್ಯದರ್ಶಿಗಳ ಸಭೆಯಲ್ಲಿ ಪರಿಶೀಲಿಸಿದಂತೆ ಕೆಲವು ಜಿಲ್ಲೆಗಳು, ಬ್ಲಾಕ್ ಹಾಗೂ ಕ್ಲಸ್ಟರ್‌ಗಳು ಸಭೆಗಳನ್ನು ಇದುವರೆಗೂ ನಡೆಸದೇ ಇರುವುದು ಹಾಗೂ ತಿಂಗಳಿಗೊಮ್ಮೆ ಘಟಕಗಳ ಸಭೆ ಸೇರಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳದಿರುವುದು ಈ ಕಛೇರಿಯಲ್ಲಿ ಗಮನಕ್ಕೆ ಬಂದಿರುತ್ತದೆ. ಇದು ಆರೋಗ್ಯಕರ ಅಲ್ಲ. ಸರಿಯಾದ ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

ಕ್ಲಸ್ಟರ್ ಹಂತ ತಿಂಗಳ 24ನೇ ತಾರೀಖು, ಬ್ಲಾಕ್ ಹಂತ ತಿಂಗಳ 27ನೇ ತಾರೀಖು, ಜಿಲ್ಲಾ ಹಂತ ತಿಂಗಳ 30ನೇ ತಾರೀಖು ಅಯಾ ತಿಂಗಳಲ್ಲಿ ಮೇಲಿನಂತೆ ನಲಿ–ಕಲಿ ಘಟಕಗಳ ಸಭೆಗಳನ್ನು ನಡೆಸಿ ವರದಿಗಳನ್ನು ಮೂರನೇ ದಿನವೇ ಮುಂದಿನ ಹಂತಗಳಿಗೆ ಹಾಗೂ ಈ ಕಛೇರಿಗೆ ತಪ್ಪದೇ ಸಲ್ಲಿಸುವುದು.

**ಈಗಾಗಲೇ ಪ್ರಾರಂಭಿಕ ಹಂತದ ಅನುಷ್ಠಾನ ಚಟುವಟಿಕೆಗಳ ಪೂರ್ಣಗೊಂಡು ನಲಿ–ಕಲಿ ಬೋಧನಾ ಕಾರ್ಯವು ಸಾಕಷ್ಟು ಪ್ರಗತಿಯಾಗಿರುವ ಹಿನ್ನೆಲೆಯಲ್ಲಿ ಈಗ ಬಳಸುತ್ತಿರುವ ಭೇಟಿ ಮತ್ತು ಕ್ರೋಡೀಕೃತ ನಮೂನೆಗಳಿಗೆ ಬದಲಾಗಿ ಈ ಪತ್ರಕ್ಕೆ ಲಗತ್ತಿಸಿರುವ ಹೊಸ ನಮೂನೆ–1 ರಲ್ಲಿ ಶಾಲಾ ಭೇಟಿ ಮಾಹಿತಿಯನ್ನು ಸಂಗ್ರಹಿಸಲು ಹಾಗೂ ಕ್ರೋಡೀಕರಣ ಮಾಡಲು ನಮೂನೆ 2, 3 & 4 ಬಳಸಲು ಅಧಿಕಾರಿಗಳು ಕ್ರಮ ತೆಗೆದು ಕೊಳ್ಳುವುದು.**

**ಭೇಟಿ ನಮೂನೆ–1 ರಲ್ಲಿ 4 ಆಯಾಮಗಳಲ್ಲಿ ಆಗಿರುವ ಪ್ರಗತಿಗೆ ಅನುಗುಣವಾಗಿ ವಸ್ತುನಿಷ್ಠವಾಗಿ ಪರಿಶೀಲಿಸಿ ಗರಿಷ್ಠ 100 ಅಂಕಗಳಿಗೆ ಶಾಲಾ ಶ್ರೇಣಿಯನ್ನು ನಿಗದಿಪಡಿಸುವುದು ಹಾಗೂ ಕೊರತೆಯಿರುವ ಆಯಾಮಗಳಿಗೆ ಪರಿಹಾರಾತ್ಮಕ ಕ್ರಮ ಕೈಗೊಳ್ಳುವುದು.**

**ಜಿಲ್ಲಾ ಘಟಕಗಳು ಕ್ರೋಢೀಕೃತ ವರದಿಯನ್ನು ನಮೂನೆ 4ರಲ್ಲಿ ದಿನಾಂಕ: 12.12.2009 ರೊಳಗೆ ಈ ಕಛೇರಿಗೆ ತಲುಪುವಂತೆ ತಪ್ಪದೇ ಕಳುಹಿಸುವುದು.**

ಸಂದರ್ಶನಕಾರರ ನಮೂನೆ–1 ಹಾಗೂ ಕ್ರೋಢೀಕೃತ ನಮೂನೆ 2, 3 & 4ನ್ನು ಲಗತ್ತಿಸಿದ್ದು, ಡಿ.ಡಿ.ಪಿ.ಐ(ಆಡಳಿತ ಮತ್ತು ಅಭಿವೃದ್ಧಿ) ಪರಸ್ಪರ ಸಮಾಲೋಚಿಸಿ ಅಗತ್ಯಕ್ಕನುಗುಣವಾಗಿ ಭೇಟಿ ನಮೂನೆಗಳನ್ನು ಮುದ್ರಿಸಿ ಹಂಚುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡುವುದು. ಈ ಸಂಬಂಧ ಯಾವುದೇ ದೂರುಗಳು ಬರದಂತೆ ಡಿ.ಡಿ.ಪಿ.ಐ(ಆಡಳಿತ) ಕ್ರಮ ತೆಗೆದುಕೊಳತಕ್ಕದ್ದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ–ಬೆಂಗಳೂರು

ಇವರಿಗೆ,

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು.
2. ರಾಜ್ಯದ ಎಲ್ಲಾ ಡಿ.ಡಿ.ಪಿ.ಐ ಮತ್ತು ಡಿ.ವೈ.ಪಿ.ಸಿ. ಯವರಿಗೆ.
3. ರಾಜ್ಯದ ಎಲ್ಲಾ ಬಿ.ಇ.ಓ/ಬಿ.ಆರ್.ಸಿ. ಯವರಿಗೆ.

ಇವರಿಗೆ ಮಾಹಿತಿಗೆ ಮತ್ತು ಮುಂದಿನ ಕ್ರಮಕ್ಕಾಗಿ,

4. ಅಪರ ಆಯುಕ್ತರು, ಆಯುಕ್ತರ ಕಛೇರಿ ಧಾರವಾಡ/ಗುಲ್ಬರ್ಗಾ.
5. ನಿರ್ದೇಶಕರು ಪ್ರಾಥಮಿಕ/ಪ್ರೌಢ/ಮೈನಾರಿಟಿ/ಡಿ.ಎಸ್.ಇ.ಆರ್.ಟಿ/ಸ.ಶಿ.ಅ/ಆಯುಕ್ತಾಲಯ ಧಾರವಾಡ /ಗುಲ್ಬರ್ಗಾ
6. ಸಹ ನಿರ್ದೇಶಕರು (ಬೆಳಗಾಂ, ಗುಲ್ಬರ್ಗಾ, ಮೈಸೂರು)
7. ಪ್ರಾಂಶುಪಾಲರು ಸಿ.ಟಿ.ಇ, ಬೆಳಗಾಂ/ಗುಲ್ಬರ್ಗಾ/ಜಮಖಂಡಿ/ಚಿತ್ರದುರ್ಗ/ಮೈಸೂರು/ಮಂಗಳೂರು
8. ಸರ್ವ ಶಿಕ್ಷಣ ಅಭಿಯಾನ ರಾಜ್ಯ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಮಲೋಚಕರಿಗೆ.

ಇವರಿಗೆ ಪ್ರತಿಯನ್ನು ಸಲ್ಲಿಸಿದೆ,

9. ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಬೆಂಗಳೂರು.
10. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.